ದಿನಾಂಕ 15-09-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ ಎಂ.ಎಸ್.ಹೆಚ್ ವಕೀಲರಿಂದಃ</u>**

1. ಶೆಡ್ಡಿನ ಸುತ್ತಲೂ ಪ್ರತಿವಾದಿಯರು ಗೋಡೆಗಳನ್ನು ಕಟ್ಟಿರುವುದಿಲ್ಲ. ಶೆಡ್ಡಿನ ಮೇಲ್ಛಾವಣಿಯು ಸಹ ಶೀಟಿನಿಂದ ಕೂಡಿರುತ್ತದೆ. ಸಾಕ್ಷಿಯು ಮುಂದುವರೆದು ಸದರಿ ಶೆಡ್ಡು ಪ್ರಸ್ತುತ ಬಿದ್ದಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಶೆಡ್ಡು ಮಳೆಯ ಕಾರಣಕ್ಕೆ ಸುಮಾರು ಒಂದು ತಿಂಗಳ ಹಿಂದೆ ಬಿದ್ದಿರುತ್ತದೆ. ಈ ದಾವೆಯನ್ನು ಸಲ್ಲಿಸುವ ಕಾಲಕ್ಕೆ ಶೆಡ್ಡು ಇತ್ತು ಎಂದು ತೋರಿಸಲು ಛಾಯಾ ಚಿತ್ರಗಳನ್ನು ಹಾಜರುಪಡಿಸಿರುವುದಿಲ್ಲ. ಶೆಡ್ಡು ಇಂದಿಗೂ ಸಹ ಉತ್ತಮ ಸ್ಥಿತಿಯಲ್ಲಿ ಇದ್ದರೂ ಸಹ ಬಿದ್ದಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

2. ನಾನು ಮತ್ತು ಇತರರು ಸ ನಂಃ 175/4 ರ ಜಮೀನಿನಲ್ಲಿ ತೆಗೆದುಕೊಂಡಿರುವ ಆಸ್ತಿಗಳಲ್ಲಿ ಮನೆಗಳನ್ನು ಕಟ್ಟಿಕೊಂಡು ವಹಿವಾಟು ಮಾಡುತ್ತಿದ್ದೇವೆ. ದಾವಾ ಆಸ್ತಿಯಾದ 14 ಗುಂಟೆ ಜಮೀನಿನಲ್ಲಿ ನಾನು ಮನೆಯನ್ನು ಕಟ್ಟಿಕೊಂಡ ವಹಿವಾಟು ಮಾಡುತ್ತಿದ್ದೇನೆ. ನನ್ನನ್ನು ಸೇರಿದಂತೆ ದಾವುಲ್ ಗಂದಿಗೇರ, ಶಿರಸಂಗೆಮ್ಮ ಚಹಾದ ಅಂಗಡಿ, ಮುಕ್ತಿಯಾರ ಗದಿಗೇರ, ಮತ್ತು ಮುತ್ತೆವ್ವ  ಜಂಟಿಯಾಗಿ ಖರೀದಿಸಿರುತ್ತೇವೆ. 14 ಗುಂಟೆ ಜಮೀನಿನಲ್ಲಿ ನಾನು ಸೇರಿದಂತೆ ದಾವುಲ್ ಗಂದಿಗೇರ, ಶಿರಸಂಗೆಮ್ಮ ಚಹಾದ ಅಂಗಡಿ ಮತ್ತು ಮುತ್ತೆವ್ವ ಅವರು ಮನೆಗಳನ್ನು ಕಟ್ಟಿಕೊಂಡಿರುತ್ತೇವೆ. ನಾನು 4 ಗುಂಟೆಯಲ್ಲಿ ಮನೆಯನ್ನು ಕಟ್ಟಿಕೊಂಡಿರುತ್ತೇನೆ. ದಾವುಲ್ ಗಂದಿಗೇರ, ಶಿರಸಂಗೆಮ್ಮ ಚಹಾದ ಅಂಗಡಿ ಮತ್ತು ಮುತ್ತೆವ್ವ ಅವರುಗಳು ಸಹ ಒಟ್ಟು 14 ಗುಂಟೆ ಜಮೀನಿನಲ್ಲಿ ತಲಾ 2 ಗುಂಟೆಯಲ್ಲಿ ಮನೆಯನ್ನು ಕಟ್ಟಿಕೊಂಡಿರುತ್ತಾರೆ. ನಾನು 4 ಗುಂಟೆಯ ಪೈಕಿ ದಕ್ಷಿಣ ಭಾಗದ ಸ್ವಲ್ಪ ಜಾಗದಲ್ಲಿ ಮನೆಯನ್ನು ಕಟ್ಟಿಕೊಂಡಿರುತ್ತೇನೆ. ನಾನು ವಹಿವಾಟಿನಲ್ಲಿದ್ದ 4 ಗುಂಟೆಯ ಆಸ್ತಿಯ ಸುತ್ತಲೂ ಬೇಲಿಯನ್ನು ಹಾಕಿರುವುದಿಲ್ಲ.

3. ಪ್ರತಿವಾದಿಯರು ದಾವಾ ಆಸ್ತಿಯಲ್ಲಿ ಪೂ-ಪ-22 ಅಡಿ, ಉ-ದ-14 ಅಡಿಗಳ ಅಳತೆಯ ಜಾಗದಲ್ಲಿ ಅನಧಿಕೃತವಾಗಿ ಶೆಡ್ಡನ್ನು ನಿರ್ಮಿಸಿರುತ್ತಾರೆ. ಅಷ್ಟೇ ಅಳತೆಯಲ್ಲಿ

ಪ್ರತಿವಾದಿಗಳು ಶೆಡ್ಡನ್ನು ನಿರ್ಮಿಸಿರುತ್ತಾರೆ ಎಂದು ನಾನು ಅಳತೆ ಮಾಡಿದ ಮೇರೆಗೆ ಹೇಳುತ್ತಿದ್ದೇನೆ. ನನಗೆ ಮತ್ತು ಇತರ 5 ಮಂದಿಗೆ 14 ಗುಂಟೆ ಜಾಗವನ್ನು ಕುರುವತ್ತೆಪ್ಪ ಬಸವಂತಪ್ಪ ಅಂಬಿಗೇರ ರವರು ಮಾರಾಟ ಮಾಡಿರುತ್ತಾರೆ. ಕುರುವತ್ತೆಪ್ಪ ಅವರ ಸಹಿಗಳನ್ನು ನೋಡಿದರೆ ನನಗೆ ಗುರುತಿಸಲು ಆಗುವುದಿಲ್ಲ. ಉಮೇಶ ತಳವಾರ ರವರು ಒಂದು ಬಾರಿ ವಿಧಾನಸಭಾ ಚುನಾವಣೆಗೆ ಸ್ಪರ್ಧಿಸಿದ್ದರು ಎಂದರೆ ಸರಿ. ಅವರು ಸಮಾಜ ಸೇವೆಯಲ್ಲಿ ತೊಡಗಿಸಿ ಕೊಂಡಿದ್ದಾರೆ ಎಂದರೆ ಸರಿಯಲ್ಲ.

4. ಉಮೇಶ ತಳವಾರ ರವರ ಮನೆಗೂ ಮತ್ತು ನನ್ನ ಮನೆಗೂ ಸುಮಾರು ಅರ್ಧ ಕಿ ಮೀಗಳ ಅಂತರ ಇದೆ. ಶೆಡ್ಡನ್ನು ಕಟ್ಟಿರುವ ಸ್ಥಳದಿಂದಲೂ ಪ್ರತಿವಾದಿಯರ ಮನೆಗೂ ಸುಮಾರು 150 ಮೀಗಳ ಅಂತರ ಇದೆ. ಪ್ರತಿವಾದಿಯರು ಕಟ್ಟಿರುವ ಮನೆಯ ಜಾಗವನ್ನು ಖರೀದಿ ಮಾಡಿ ಕಟ್ಟಿದ್ದಾರೋ ಅಥವಾ ಇಲ್ಲವೋ ನನಗೆ ಗೊತ್ತಿಲ್ಲ. ಪ್ರತಿವಾದಿಯರು ಕಟ್ಟಿರುವ ಮನೆಯು ಯಾವ ಸರ್ವೇ ನಂಬರಿನ ಜಮೀನಿನಲ್ಲಿದೆ ಎಂದು ಗೊತ್ತಿಲ್ಲ. 2017 ನೇ ಇಸವಿಯಲ್ಲಿ ಪ್ರತಿವಾದಿಗಳು ದಾವಾ ಆಸ್ತಿಯಲ್ಲಿ ಶೆಡ್ಡನ್ನು ಕಟ್ಟಿರುತ್ತಾರೆ. ಪ್ರತಿವಾದಿಯು ದಾವಾ ಆಸ್ತಿಯಲ್ಲಿ ಶೆಡ್ಡನ್ನು ಹಾಕಿರುವ ರೀತಿ ಬೇರೆ ಆಸ್ತಿಗಳಲ್ಲಿ ಶೆಡ್ಡುಗಳನ್ನು ಅನಧಿಕೃತವಾಗಿ ಹಾಕಿರುವುದಿಲ್ಲ. ಪ್ರತಿವಾದಿಗಳು ನಿರ್ಮಿಸಿರುವ ತಗಡಿನ ಶೆಡ್ಡಿನ ಮನೆಯಲ್ಲಿ ಅವರು ವಹಿವಾಟು ಮಾಡುತ್ತಿಲ್ಲ. ಸಾಕ್ಷಿಯು ಮುಂದುವರೆದು ಪ್ರತಿವಾದಿಗಳು ದಾವಾ ಆಸ್ತಿ ಅವರ ಜಾಗಾ ಎಂದು ತಗಡಿನ ಶೆಡ್ಡನ್ನು ಮಾತ್ರ ಹಾಕಿರುತ್ತಾರೆ ಎಂದು ನುಡಿಯುತ್ತಾರೆ.

5. ಸ ನಂಃ 175/4 ರ ಜಮೀನಿನಲ್ಲಿ ನನಗೆ ಮತ್ತು ಮೇಲೆ ನಮೂದಿಸಿದ ಇತರ 5 ಜನರಿಗೆ 14 ಗುಂಟೆ ಜಮೀನನ್ನು ಶ್ರೀ ಕುರುವತ್ತೆಪ್ಪ ಅವರು ಮಾರಾಟ ಮಾಡಿರುವುದನ್ನು ಹೊರತುಪಡಿಸಿ ಇತರರಿಗೆ ಆಸ್ತಿಯನ್ನು ಮಾರಾಟ ಮಾಡಿರುವುದಿಲ್ಲ. ಕುರುವತ್ತೆಪ್ಪ ಅವರು ಮನೆಯ ಅಡಚಣೆಗೊಸ್ಕರ ಸ ನಂಃ 175/4 ರ ಜಮೀನಿನಲ್ಲಿ



ಇತರರಿಗೂ ಸಹ ಸ್ವಲ್ಪ ಜಮೀನುಗಳನ್ನು ಮಾರಾಟ ಮಾಡಿದ್ದು, ಸದರಿ ಖರೀದಿ ವ್ಯವಹಾರದಲ್ಲಿ ನೀವು ಭಾಗವಹಿಸಿದ್ದೀರಾ ಎಂಬ ಸೂಚನೆಗೆ ಸಾಕ್ಷಿಯು ಕುರುವತ್ತೆಪ್ಪ

ಅವರು ಯಾರಿಗೂ ಆಸ್ತಿ ಮಾರಾಟ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ.

6. ಕುರುವತ್ತೆಪ್ಪ ಅವರು ನನಗೆ ಯಾವ ರೀತಿಯಲ್ಲೂ ಸಂಬಂಧ ಇರುವುದಿಲ್ಲ. ಕುರುವತ್ತೆಪ್ಪ ಅವರು ಇತರರೊಂದಿಗೆ ಯಾವ ಯಾವ ವ್ಯವಹಾರಗಳನ್ನು ಮಾಡುತ್ತಿದ್ದರು ಎಂದು ನನಗೆ ಗೊತ್ತಿಲ್ಲ ಎಂದರೆ ಸಾಕ್ಷಿಯು ಆತನ ವ್ಯವಹಾರಗಳು ನನಗೆ ಹೇಗೆ ಗೊತ್ತಾಗಬೇಕೆಂದು ಹೇಳುತ್ತಾರೆ. 14 ಗುಂಟೆ ಜಮೀನನ್ನು ಖರೀದಿಸುವ ಪೂರ್ವದಲ್ಲಿಯೇ ಪ್ರತಿವಾದಿಗಳು ದಾವಾ ಆಸ್ತಿಯಲ್ಲಿ ಶೆಡ್ಡನ್ನು ನಿರ್ಮಿಸಿದರು ಎಂದರೆ ಸಾಕ್ಷಿಯು ನಾನು 2015 ನೇ ಇಸವಿಯಲ್ಲಿ ದಾವಾ ಜಮೀನನ್ನು ಖರೀದಿಸಿದ್ದು ನಂತರ ಅಂದರೆ 2017 ರಲ್ಲಿ ಪ್ರತಿವಾದಿಗಳು ಶೆಡ್ಡನ್ನು ನಿರ್ಮಿಸಿರುತ್ತಾರೆ ಎಂದು ನುಡಿಯುತ್ತಾರೆ. ಪ್ರತಿವಾದಿಗಳು ಶೆಡ್ಡನ್ನು ನಿರ್ಮಿಸಿರುವ ಜಾಗವನ್ನು ಖರೀದಿ ಮಾಡಿದ್ದೇನೆ ಎಂದು ಆದರಿಸಿ ಶೆಡ್ಡನ್ನು ನಿರ್ಮಿಸಿರುತ್ತೇನೆ ಎಂದು ಹೇಳಿರುತ್ತಾರೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯಲ್ಲಿ ಪ್ರತಿವಾದಿಗಳು ಶೆಡ್ಡನ್ನು ನಿರ್ಮಿಸಿದ ಬಗ್ಗೆ ಗ್ರಾಮದಲ್ಲಿ ಪಂಚಾಯಿತಿ ಆಗಿದ್ದು, ಪ್ರತಿವಾದಿಗಳು ಶೆಡ್ಡನ್ನು ತೆರವುಗೊಳಿಸಲು ಒಪ್ಪಿಕೊಂಡಿರುವುದಿಲ್ಲ.

7. ಹೊಂಕಣ ಗ್ರಾಮದಲ್ಲಿ ಎಷ್ಟು ಜನಸಂಖ್ಯೆ ಇದೆ ಎಂದು ನನಗೆ ಗೊತ್ತಿಲ್ಲ. ಹೊಂಕಣ ಗ್ರಾಮದಲ್ಲಿ ಸುಮಾರು 500-600 ಮನೆಗಳು ಇದ್ದು, ಚಿಕ್ಕ ಪ್ರಮಾಣದ ಗ್ರಾಮವಾಗಿರುತ್ತದೆ. ಕುರುವತ್ತೆಪ್ಪ ಅವರು ಸ ನಂಃ 175/4 ರ ಜಮೀನಿನಲ್ಲಿ 1 ನೇ ಪ್ರತಿವಾದಿಯೊಂದಿಗೆ ಆಸ್ತಿಯನ್ನು ಮಾರಾಟ ಮಾಡಲು ಖರೀದಿ ವ್ಯವಹಾರ ಆಗಿರುತ್ತದೆ ಎಂದರೆ ಸರಿಯಲ್ಲ. 25-02-2011 ರಂದು 1 ನೇ ಪ್ರತಿವಾದಿಯು ದಾವಾ ಜಮೀನಿನಲ್ಲಿ ಆಸ್ತಿಯನ್ನು ಖರೀದಿಸಲು ಕುರುವತ್ತೆಪ್ಪ ಅವರೊಂದಿಗೆ ಕ್ರಯದ ಕರಾರು



ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ಸದರಿ ಕರಾರಿನ ಅಡಿಯಲ್ಲಿ 1 ನೇ ಪ್ರತಿವಾದಿಯು ಕುರುವತ್ತೆಪ್ಪ ಅವರಿಗೆ ಒಟ್ಟು ರೂ.94,000/- ಪ್ರತಿಫಲದ ಹಣದ ಪೈಕಿ ರೂ.25,000/- ಮುಂಗಡ ಹಣವನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಜಮೀನಿನಲ್ಲಿ ಸ್ವಲ್ಪ ಭಾಗದ ಆಸ್ತಿಯನ್ನು ಖರೀದಿಸಲು ಸರ್ವೇ ಸ್ಕೆಚ್ ಮತ್ತು ಕೆ.ಡಿ.ಡಿ.ಸಿ

ದಾಖಲೆಯು ಆಗಬೇಕು ಎಂದು ಕರಾರು ಆಗಿತ್ತು ಎಂದರೆ ಸರಿಯಲ್ಲ. ಸಂಚಕಾರ ಕರಾರು ಪತ್ರದ ಆದ ದಿನವೇ ದಾವಾ ಆಸ್ತಿಯ ಸ್ವಾಧೀನವನ್ನು ಕುರುವತ್ತೆಪ್ಪ ಅವರು 1 ನೇ ಪ್ರತಿವಾದಿಗೆ ಬಿಟ್ಟು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಗ್ರಾಮ ಪಂಚಾಯಿತಿಯಲ್ಲಿ ದಾವಾ ಆಸ್ತಿಯಲ್ಲಿ ಪ್ರತಿವಾದಿಗಳು ಶೆಡ್ಡನ್ನು ಹಾಕಿದ್ದ ಬಗ್ಗೆ ವಿಚಾರಗಳು ಆದಾಗ ಖರೀದಿ ಕರಾರು ಪತ್ರ ಆಗಿರುವ ಬಗ್ಗೆ ಪ್ರಸ್ತಾಪ ಆಗಿತ್ತು ಎಂದರೆ ಸರಿಯಲ್ಲ.

8. ಈ ದಾವೆಯನ್ನು ಸ ನಂಃ 175/5 ರ ಜಮೀನಿಗೆ ಸಂಬಂಧಿಸಿದಂತೆ ಸಲ್ಲಿಸಿದ್ದೇನೆ. ವಾದ ಪತ್ರದ ಪ್ಯಾರಾ ನಂಃ 2 ರಲ್ಲಿ ಸ ನಂಃ 175/4 ರ ಜಮೀನು ಎಂದು ನನಗೆ ಓದಲು ಬರದೇ ಇರುವುದರಿಂದ ಬರೆಸಿರುವ ಬಗ್ಗೆ ಗೊತ್ತಿಲ್ಲ. ದಾವೆಯು ಸ ನಂಃ 175/5 ಅಥವಾ 175/4 ರ ಜಮೀನಿಗೆ ಸಂಬಂಧಿಸಿದಂತೆ ಸಲ್ಲಿಸಿದ್ದೆನೋ ಅಥವಾ ಇಲ್ಲವೋ ಎಂಬುದನ್ನು ಓದಲು ಬರುವವರಿಂದ ಓದಿಸಿ ತಿಳಿದುಕೊಂಡಿಲ್ಲ. ನಾನು ಖರೀದಿಸಿದ 14 ಗುಂಟೆ ಜಮೀನು ಸ ನಂಃ 175/5 ರ ಜಮೀನಿಗೆ ಸಂಬಂಧಿಸಿದ ಆಸ್ತಿ ಆಗಿರುತ್ತದೆ. ಖರೀದಿ ಪತ್ರದಲ್ಲಿ ನಾನು ಖರೀದಿಸಿದ ಆಸ್ತಿಯು ಸ ನಂ. 175/4 ಅಥವಾ 175/5 ಎಂದು ನಮೂದು ಆಗಿದೆಯೋ ಅಥವಾ ಇಲ್ಲವೋ ನನಗೆ ಗೊತ್ತಿಲ್ಲ. ಖರೀದಿ ಪತ್ರದಲ್ಲಿ ಸ ನಂಃ 175/4 ರ ಹಿಸ್ಸೇಯ ಆಸ್ತಿ ಎಂದು ನಮೂದಿಸಿದೆ ಎಂದರೆ ನಾನು ನೋಡಿಲ್ಲ.

9. ನಾನು ಖರೀದಿ ಮಾಡುವ ಪೂರ್ವದಲ್ಲಿ ಸ ನಂಃ 175 ಎಂದು ನಮೂದು ಇತ್ತು ಎಂದರೆ ಸಾಕ್ಷಿಯು ನನಗೆ ಓದಲು ಮತ್ತು ಬರೆಯಲು ಇರುವುದರಿಂದ ಅಷ್ಟಾಗಿ



ಗೊತ್ತಾಗುವುದಿಲ್ಲ ಎಂದು ನುಡಿಯುತ್ತಾರೆ. ಸ ನಂಃ 175 ರ ಜಮೀನು ಪ್ರಸ್ತುತ 175/1 ರಿಂದ 5 ಎಂದು 5 ಫೂಟು ಹಿಸ್ಸಾಗಳು ಆಗಿವೆ ಎಂದರೆ ಗೊತ್ತಿಲ್ಲ. ನಾನು 14 ಗುಂಟೆ ಜಮೀನನ್ನು ಖರಿದಿಸುವ ಪೂರ್ವದಲ್ಲಿ ಅದು 175 ಜಮೀನಿನ ಒಟ್ಟು 5 ಹಿಸ್ಸೇಗಳ ಪೈಕಿ ಯಾವ ಹಿಸ್ಸೇಯಲ್ಲಿ ಇದೆ ಎಂದು ನನಗೆ ಗೊತ್ತಿರುವುದಿಲ್ಲ. 1 ನೇ ಪ್ರತಿವಾದಿಯು ಕುರುವತ್ತೆಪ್ಪ ಅವರಿಂದ ಸ ನಂಃ 175 ರ ಜಮೀನಿನಲ್ಲಿ 4 ಗುಂಟೆ ಜಮೀನನ್ನು ನಾನು ತೆಗೆದುಕೊಂಡಿರುವ 14 ಗುಂಟೆ ಜಮೀನಿನ ಸ್ಥಳವನ್ನು

ಹೊರತುಪಡಿಸಿ ಖರೀದಿಸಲು ನನ್ನ ತಕರಾರು ಇರುವುದಿಲ್ಲ. 1 ನೇ ಪ್ರತಿವಾದಿಯು ಸ ನಂಃ 175 ರ ಜಮೀನಿನಲ್ಲಿ 4 ಗುಂಟೆ ಜಮೀನನ್ನು 11 ಇ ಸ್ಕೆಚ್ ಮಾಡುವ ಪೂರ್ವದಲ್ಲಿಯೇ ಖರೀದಿ ಮಾಡಿರುತ್ತಾರೆ ಎಂದರೆ ಗೊತ್ತಿಲ್ಲ. 1 ನೇ ಪ್ರತಿವಾದಿಯು ಕುರುವತ್ತೆಪ್ಪ ಅವರಿಂದ 4 ಗುಂಟೆ ಜಮೀನನ್ನು ಖರೀದಿಸಿರುವ ಬಗ್ಗೆ ನನಗೆ ಮಾಹಿತಿ ಇಲ್ಲ. ಸುಮಾರು 2000 ನೇ ಇಸವಿಯಿಂದ 4-5 ವರ್ಷಗಳ ವರೆಗೆ ನಾನು ಗ್ರಾಮದಲ್ಲಿ ಇರಲಿಲ್ಲ. ನಾನು ಸದರಿ ಸಮಯದಲ್ಲಿ ಗ್ರಾಮದಲ್ಲಿ ಇರದೇ ಇದ್ದ ಕಾರಣಕ್ಕೆ ಕುರುವತ್ತೆಪ್ಪ ಮತ್ತು 1 ನೇ ಪ್ರತಿವಾದಿಯ ನಡುವೆ ಆದ ಖರೀದಿ ವ್ಯವಹಾರದ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಗೊತ್ತಿಲ್ಲ.

10. ನಾನು 14 ಗುಂಟೆ ಖರೀದಿಸಿರುವ ಜಮೀನು ಸ ನಂಃ175/4 ರ ಹಿಸ್ಸೇಯಲ್ಲಿದ್ದು, ಪ್ರತಿವಾದಿಯು ಖರೀದಿಸಿರುವ 4 ಗುಂಟೆ ಜಮೀನು ಸ ನಂಃ 175/4 ರ ಹಿಸ್ಸೇಯ ಜಮೀನಿ ನಲ್ಲಿದ್ದು ಪ್ರತಿವಾದಿಗೆ ತೊಂದರೆ ನೀಡಲು 175/5 ರ ಹಿಸ್ಸೇಯಲ್ಲಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಖರೀದಿಸಿರುವ 14 ಗುಂಟೆ ಜಮೀನು 175/4 ರ ಹಿಸ್ಸೇಯ ಜಮೀನಿನಲ್ಲಿ ಇರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸ ನಂಃ 175/5 ರ ಜಮೀನಿ ನಲ್ಲಿ ಸಹ ನನ್ನ ಭಾಗದ 14 ಗುಂಟೆ ಜಮೀನು ಬರುವುದಿಲ್ಲ ಎಂದರೆ ಸರಿಯಲ್ಲ.

-17-

11. ನಾನು ಖರೀದಿಸಿದ 14 ಗುಂಟೆ ಜಮೀನಿನ ಪೂ- ಹನುಮಂತಪ್ಪ ಹಂಸಭಾವಿ ಇವರ ಮನೆ, ಪ- ಕುರುವತ್ತೆಪ್ಪ ಅಂಬಿಗೇರ ರವರ ಖಾಲಿ ಜಾಗ, ಉ- ಪಿ.ಡಬ್ಲ್ಯೂ.ಡಿ ರಸ್ತೆ ಮತ್ತು ದ- ಬಸವಂತಪ್ಪ ಅಂಬಿಗೇರ ರವರ ಆಸ್ತಿ ಇದೆ. ಸದರಿ ಚಕ್ಕುಬಂದಿಯು 1 ನೇ ಪ್ರತಿವಾದಿಯು ಖರೀದಿಸಿರುವ 4 ಗುಂಟೆ ಆಸ್ತಿಯ ಚಕ್ಕುಬಂದಿ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಗೆ ಮೋಸ ಮಾಡುವ ಉದ್ದೇಶದಿಂದ ನಾನು ಮತ್ತು ಕುರುವತ್ತೆಪ್ಪ ಅಂಬಿಗೇರ ರವರು ಮಿಲಾಪಿಯಾಗಿ ಸುಳ್ಳು ಖರೀದಿ ಪತ್ರವನ್ನು ಸೃಷ್ಟಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯು ನನ್ನ ಆಸ್ತಿಯಲ್ಲಿ ಶೆಡ್ಡನ್ನು ನಿರ್ಮಾಣ ಮಾಡಿರುವುದಿಲ್ಲ, ಆದರೆ ಅವರು ಖರೀದಿಸಿದ 4 ಗುಂಟೆ

ಜಮೀನಿನಲ್ಲಿ ಮಾತ್ರ ಶೆಡ್ಡನ್ನು ನಿರ್ಮಾಣ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಕುರುವತ್ತೆಪ್ಪ ಅವರು 1 ನೇ ಪ್ರತಿವಾದಿಗೆ 4 ಗುಂಟೆ ಜಮೀನನ್ನು ಈಗಾಗಲೇ ಖರೀದಿಗೆ ಕೊಟ್ಟಿರುತ್ತೇನೆ ಎಂದು ತಿಳಿಸಿದ್ದರೂ ಸಹ ಆತನನ್ನು ಹೆದುರಿಸಿ ನಂತರದಲ್ಲಿ 14 ಗುಂಟೆ ಜಮೀನಿಗೆ ಸಂಬಂಧಿಸಿದಂತೆ ಖರೀದಿಪತ್ರವನ್ನು ಬರೆಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

12. ಕುರುವತ್ತೆಪ್ಪ ಅವರು 11 ಇ ಸ್ಕೆಚ್ ಆದ ನಂತರ 4 ಗುಂಟೆ ಜಮೀನನ್ನು 1 ನೇ ಪ್ರತಿವಾದಿಗೆ ಮಾರಾಟ ಮಾಡಿದ ನಂತರ ನನಗೆ ಜಮೀನನ್ನು ಮಾರಾಟ ಮಾಡುತ್ತೇನೆ ಎಂದು ಹೇಳಿದರೂ ಸಹ ನಾನು ಖರೀದಿ ಪತ್ರವನ್ನು ಬರೆಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. 2011 ರಿಂದಲೂ ಖರೀದಿ ಕರಾರು ಪತ್ರ ಆದ ದಿನದಿಂದಲೂ 1 ನೇ ಪ್ರತಿವಾದಿಯು ದಾವಾ ಶೆಡ್ಯೂಲ್ ಆಸ್ತಿಯನ್ನು ಒಳಗೊಂಡ 4 ಗುಂಟೆ ಜಮೀನನ್ನು ವಹಿವಾಟು ಮಾಡುತ್ತಿದ್ದಾನೆ ಎಂದರೆ ಸರಿಯಲ್ಲ. ಈ ದಾವೆಯನ್ನು ಸಲ್ಲಿಸಲು ಯಾವುದೇ ಕಾರಣಗಳು ಇರದೇ ಇದ್ದರೂ ಕೂಡಾ ಸುಳ್ಳು ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯು ತಾನು ಖರೀದಿಸಿದ 4 ಗುಂಟೆ ಜಮೀನಿನಲ್ಲಿ ಶೆಡ್ಡನ್ನು ನಿರ್ಮಾಣ ಮಾಡಿದ್ದು, ಆತನು ನಿರ್ಮಿಸಿರುವ ಶೆಡ್ಡು ನನ್ನ ಆಸ್ತಿಯಲ್ಲಿ ಬರುವುದಿಲ್ಲ



ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ಹೆಂಡತಿ ಪೊಲೀಸ್ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದು ಅದರ ದುರುಪಯೋಗಪಡಿಸಿಕೊಂಡು ಪ್ರತಿವಾದಿಗಳು ನನಗೆ ದಾವಾ ಆಸ್ತಿಯನ್ನು ವಹಿವಾಟು ಮಾಡಲು ದೌರ್ಜನ್ಯ ಎಸಗಿರುತ್ತಾರೆಂದು ಸುಳ್ಳು ಬರೆಸಿರುತ್ತಾರೆ ಎಂದರೆ ಸರಿಯಲ್ಲ.  ಸ ನಂಃ 175/4 ರ ಹಿಸ್ಸೇಯ ಜಮೀನಿನಲ್ಲಿಯೇ ಖರೀದಿ ಪತ್ರದ ಪ್ರಕಾರ ನನ್ನ ಆಸ್ತಿ ಬರುತ್ತದೆ ಎಂದು ಖಾತೆಯನ್ನು ದುರಸ್ತಿಪಡಿಸಿಕೊಳ್ಳಲು ಪ್ರಯತ್ನ ಪಟ್ಟಿದ್ದೀರಾ ಎಂಬ ಸೂಚನೆಗೆ ಸಾಕ್ಷಿಯು ನನಗೆ ಓದಲು ಬರೆಯಲು ಬರುವುದಿಲ್ಲ ವಾದ್ದರಿಂದ ಗೊತ್ತಾಗುವುದಿಲ್ಲ ಎಂದು ನುಡಿಯುತ್ತಾರೆ. ನಾನು ಮತ್ತು ಕುರುವತ್ತೆಪ್ಪ ಸೇರಿಕೊಂಡು ಮಾರಾಟ ಮಾಡಿದ ಮತ್ತು ಕ್ರಯಕ್ಕೆ ಪಡೆದ ಜಮೀನಿನ ಹಿಸ್ಸೇಗೆ ಸಂಬಂಧಿಸಿದಂತೆ ಸರಿಯಾಗಿ ಖಾತೆಯನ್ನು ದುರಸ್ತಿಪಡಿಸಿಕೊಳ್ಳದೇ ಪ್ರತಿವಾದಿಗೆ ತೊಂದರೆ ನೀಡಲು ಈ ಸುಳ್ಳು ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

Sd/-

ದಿವಾಣಿ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ
ಹಾನಗಲ್

ಸಾಕ್ಷಿದಾರರ ಸಹಿ